ದೂರವಿರುವ ಭೀಮಾಶಂಕರ ಧಾಮ್‌ಗೆ ಗಾರ್ಚುಕ್–ಪಾಮೋಹಿ ರೋಡ್, 'ಎನ್.ಎಚ್. 37' ಮಾರ್ಗವಾಗಿ ಬರಬಹುದು. ಭೀಮಾಶಂಕರನ ಧ್ಯಾನದಲ್ಲಿ ಭವ್ಯ ಮಂದಿರವನ್ನು ನಿರೀಕ್ಷಿಸಿಕೊಂಡು ಇಲ್ಲಿಗೆ ಬಂದರೆ ಆಶ್ಚರ್ಯ ಕಾದಿರುತ್ತದೆ. ಇಲ್ಲಿ ಇತರ ಕಡೆಗಳಲ್ಲಿ ಇರುವಂತೆ ದೇವಸ್ಥಾನ ಇಲ್ಲ. ಪರಿಸರದ ನಡುವೆಯೇ ಲಿಂಗರೂಪಿ ಶಿವನಿದ್ದಾನೆ. ಕಲ್ಲು–ಬಂಡೆಗಳ ನಡುವೆ ಹರಿದು ಬರುವ ನೀರಿನಲ್ಲಿ ಜ್ಯೋತಿರ್ಲಿಂಗಕ್ಕೆ ಅಭಿಷೇಕವಾಗುತ್ತದೆ.

ಜ್ಯೋತಿರ್ಲಿಂಗದ ಹಾದಿಯಲ್ಲಿಯೇ 'ದ್ವಾದಶ ಜ್ಯೋತಿರ್ಲಿಂಗ ಶಿವಧಾಮ್' ಅನ್ನುವ ಬೋರ್ಡ್ ಎದ್ದುಕಾಣುತ್ತದೆ. ಪ್ರವೇಶದ್ವಾರದಲ್ಲಿ ನಂದಿಯ ವಿಗ್ರಹವಿದೆ.

ಸಾಮಾನ್ಯವಾಗಿ ಭಕ್ತರು ಜ್ಯೋತಿರ್ಲಿಂಗದ ಅಧಿಕೃತ ಮಾಹಿತಿಗಾಗಿ 'ಶಿವ ಪುರಾಣ'ವನ್ನು ಆಶ್ರಯಿಸುತ್ತಾರೆ. ಆದರೆ ಗುವಾಹಟಿಯ ಜನರು ಭೀಮಾಶಂಕರ ಜ್ಯೋತಿರ್ಲಿಂಗವನ್ನು ಡಾಕಿನಿ ಪರ್ವತ ಕ್ಷೇತ್ರದಲ್ಲಿರುವ ಜ್ಯೋತಿರ್ಲಿಂಗ ಎಂದು ನಂಬುತ್ತಾರೆ. ದ್ವಾದಶ ಜ್ಯೋತಿರ್ಲಿಂಗದ ಶ್ಲೋಕದಲ್ಲಿ 'ಡಾಕಿನ್ಯಾಮ್ ಭೀಮಾಶಂಕರಮ್' ಎನ್ನುವ ಸಾಲು ಬರುತ್ತದೆ. ಅಂದರೆ ಡಾಕಿನಿ ಬೆಟ್ಟವೇ ಭೀಮಾಶಂಕರ ಇರುವ ಜಾಗ. ಅದು ಅಸ್ಸಾಂನಲ್ಲಿ ಇದೆಯೇ ಹೊರತು ಮಹಾರಾಷ್ಟ್ರದಲ್ಲಿಲ್ಲ ಎನ್ನುವುದು ಕಾಮರೂಪದ ಭಕ್ತರ ತರ್ಕ.

ಕಾಮರೂಪದ ಡಾಕಿನಿ ಬೆಟ್ಟದ ಭೀಮಾಶಂಕರ ಯಾಕೆ ಪ್ರಸಿದ್ಧಿ ಪಡೆಯಲಿಲ್ಲ? ಈ ಪ್ರಶ್ನೆಗೆ ಅಲ್ಲಿನ ಜನ ನೀಡುವ ಉತ್ತರ ಹೀಗಿದೆ:

ಅಸ್ಸಾಂನಲ್ಲಿ ಶ್ರೀಮಂತ್ ಶಂಕರದೇವ್ ಅವರು ಕೈಗೊಂಡಿದ್ದ ಆಗಿನ 'ವೈಷ್ಣವ ಭಕ್ತಿ' ಚಳವಳಿಯ ತೀವ್ರತೆಯಿಂದಾಗಿ ಅಲ್ಲಿನ ಶಿವಭಕ್ತಿಯ ಕ್ಷೇತ್ರಗಳು ತೆರೆಮರೆಯಲ್ಲಿ ಉಳಿದಿರಬಹುದು ಎನ್ನುವುದೊಂದು ತರ್ಕ. ಅಂದಹಾಗೆ, ಶ್ರೀಮಂತ್ ಶಂಕರದೇವ್ ಅಸ್ಸಾಂನ ನಗಾಂವ್ ಜಿಲ್ಲೆಯಲ್ಲಿ ಕ್ರಿ.ಶ. 1449ರಲ್ಲಿ ಜನಿಸಿದವರು. ವೈಷ್ಣವ ಪಂಥದ ಪ್ರಚಾರದಲ್ಲಿ ಮುಂಚೂಣಿಯಲ್ಲಿದ್ದವರು. ಕಾಮರೂಪ ರಾಜ್ಯದ ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿಗೆ ಅವರ ಕೊಡುಗೆ ಅಪಾರ. ಶ್ರೀಮಂತ್ ಶಂಕರದೇವ್ ಅವರಿಂದಾಗಿಯೇ ಅಸ್ಸಾಂನಲ್ಲಿ ವೈಷ್ಣವರಂತೆ ಶಿವಭಕ್ತಿಯ ತಾಣ ಪ್ರಸಿದ್ಧಿ ಪಡೆಯಲಿಲ್ಲ ಎನ್ನಲಾಗುತ್ತದೆ. ಪ್ರಸ್ತುತ ಗುವಾಹಟಿಯಲ್ಲಿ ಶ್ರೀಮಂತ್ ಶಂಕರದೇವ್ ಸ್ಮರಣಾರ್ಥ ಮ್ಯೂಸಿಯಂ ಇದೆ, ಅಲ್ಲಿಗೆ ಗಣನೀಯ ಸಂಖ್ಯೆಯ ಪ್ರವಾಸಿಗರು ಭೇಟಿ ಕೊಡುತ್ತಾರೆ

ಈ ಸ್ಥಾನದ ವರ್ಣನೆ 'ಶಿವಪುರಾಣ'ದಲ್ಲಿ ಇರುವಂತೆ ಮಹಾರಾಷ್ಟ್ರದ ಪುಣೆ ಸಮೀಪದಲ್ಲಿನ ಸಹ್ಯಾದ್ರಿ ಬೆಟ್ಟ ಕ್ಷೇತ್ರದಲ್ಲಿನ ಭೀಮಾಶಂಕರದ ಬಗ್ಗೆ ಉಲ್ಲೇಖಗಳು ದೊರೆಯುವುದಿಲ್ಲ. ಹಾಗಾಗಿ, 'ಶಿವಪುರಾಣ' ಕೂಡ ಅಸ್ಸಾಂನ ಜ್ಯೋತಿರ್ಲಿಂಗಕ್ಕೆ ಅಧಿಕೃತ ಮೊಹರು ಒತ್ತುತ್ತದೆ ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

### ತುಲಾ ರಾಶಿಯ ಆರರ ನಂಟು

ದ್ವಾದಶ ರಾಶಿಗಳಲ್ಲಿ ಆರನೆಯ ಕನ್ಯಾ ರಾಶಿಯವರು ಇಲ್ಲಿಗೆ ಹೆಚ್ಚಾಗಿ ಬಂದು ಭೀಮಾಶಂಕರನನ್ನು ಪೂಜಿಸುತ್ತಾರೆ. ಭೀಮಾಶಂಕರ ಜ್ಯೋತಿರ್ಲಿಂಗ ಆರನೆಯದು ಎನ್ನುವುದಕ್ಕೂ ತುಲಾ ಆರನೆಯ ರಾಶಿ ಎನ್ನುವುದಕ್ಕೂ ತಳಕು ಹಾಕಲಾಗಿದೆ.



ಗುವಾಹಟಿಯಿಂದ 8.6 ಕಿಲೋಮೀಟರ್ ಹಾದಿಯಲ್ಲಿಯೂ ಈ ಕ್ಷೇತ್ರಕ್ಕೆ ಬರಬಹುದು. ಜ್ಯೋತಿರ್ಲಿಂಗ ಭೀಮಾಶಂಕರ ದರ್ಶನ ಮಾಡಲು ಕಾಮರೂಪ್ ಜಿಲ್ಲೆಯ ಮನೋಹಾರಿ ಬೆಟ್ಟ ಮತ್ತು ಅರಣ್ಯ ಕ್ಷೇತ್ರದ ನಡುವೆ ಹಾದು ಬರುವಾಗ ಅಲ್ಲಿನ ಪ್ರಕೃತಿ ಸೌಂದರ್ಯಕ್ಕೆ ನೋಡುಗರ ಮನ ಮರುಳಾಗುತ್ತದೆ. ಕಣಿವೆಯ ಹಾದಿಯಲ್ಲಿ ಸಾಗಲು ಭವ್ಯ ರೂಪದಲ್ಲಿ ಬೆಟ್ಟದಿಂದ ಹರಿದು ಬರುವ ನದಿಯ ನೀರು ಭೀಮಾಶಂಕರ ಜ್ಯೋತಿರ್ಲಿಂಗಕ್ಕೆ ಅಭಿಷೇಕ ಮಾಡಿಯೇ ಮುಂದಕ್ಕೆ ಹರಿಯುತ್ತದೆ. ದಿನ 24 ಗಂಟೆಯೂ ಜ್ಯೋತಿರ್ಲಿಂಗಕ್ಕೆ ಜಲಾಭಿಷೇಕ. ಮಳೆಗಾಲದಲ್ಲಂತೂ ಶಿವ ಗಂಗೆಯಲ್ಲಿ ಲೀನ.



ಜ್ಯೋತಿರ್ಲಿಂಗಗಳಲ್ಲಿ ಆರನೆಯ ಜ್ಯೋತಿರ್ಲಿಂಗಕ್ಕೆ 'ಭೀಮಾಶಂಕರ' ಎನ್ನುವ ಹೆಸರು ಹೇಗೆ ಬಂತು ಎನ್ನುವ ಪ್ರಶ್ನೆಯ ಹಿಂದೊಂದು ಸ್ವಾರಸ್ಯಕರ ಕಥೆಯಿದೆ. ಈ ಕಥೆ ರಾಮಾಯಣ ಕಾಲಕ್ಕೆ ಕರೆದೊಯ್ಯುತ್ತದೆ. ರಾವಣನ ತಮ್ಮ ಕುಂಭಕರ್ಣನು ಪಾತಾಳಲೋಕದ ರಾಜಕುಮಾರಿ ಕರ್ಕಟಿ ಜೊತೆ ವಿವಾಹವಾದ. ಅವರ ಪುತ್ರನೇ ಭೀಮಾಸುರ. ರಾವಣನು ರಾಮನ ವಿರುದ್ಧ ಹೋರಾಟಕ್ಕೆ ಕುಂಭಕರ್ಣನನ್ನು ಲಂಕೆಗೆ ಕರೆಸಿಕೊಂಡ. ಆ ಯುದ್ಧದಲ್ಲಿ ಕುಂಭಕರ್ಣ ಸಾವನ್ನಪ್ಪಿದ. ಈ ಘಟನೆಯ ನಂತರ ಭೀಮಾಸುರ ಬ್ರಹ್ಮನನ್ನು ತಪಸ್ಸು ಮಾಡಿ ವರವನ್ನು ಪಡೆದ, ವರದ ಶಕ್ತಿಯಿಂದ ಅಹಂಕಾರಿಯಾದ. ರಾಜನೊಬ್ಬ ಪೂಜಿಸುತ್ತಿದ್ದ ಶಿವಲಿಂಗವನ್ನು ಭೀಮಾಸುರ ಭಿನ್ನ ಮಾಡಿದಾಗ, ಶಿವ ಪ್ರತ್ಯಕ್ಷನಾಗಿ ಭೀಮಾಸುರನನ್ನು ವಧಿಸಿದ. ನಂತರ ಎಲ್ಲರ ಪ್ರಾರ್ಥನೆಯಂತೆ ಶಿವನು ಲಿಂಗರೂಪದಲ್ಲಿ ಅಲ್ಲಿ ನೆಲೆನಿಂತ. ಭೀಮಾ ಮತ್ತು ಶಂಕರರ ಯುದ್ಧದ ಕಾರಣ 'ಭೀಮಾಶಂಕರ ಜ್ಯೋತಿರ್ಲಿಂಗ' ಎಂಬ ಹೆಸರು ಬಂತು ಎನ್ನುವುದು ಕಥೆ.

ಶ್ರಾವಣ ಮಾಸದಲ್ಲಿ ಹಾಗೂ ಶಿವರಾತ್ರಿ ಸಮಯದಲ್ಲಿ ಇಲ್ಲಿಗೆ ಭಕ್ತರು ಅಪಾರ ಸಂಖ್ಯೆಯಲ್ಲಿ ಬರುತ್ತಾರೆ. ಗುವಾಹಟಿಗೆ ಬಂದವರು ಅರ್ಧಗಂಟೆಯ ದಾರಿಯಲ್ಲಿ ಇಲ್ಲಿಗೆ ತಲುಪಬಹುದು. ವಸಿಷ್ಠ ಆಶ್ರಮದಿಂದ ಇಲ್ಲಿಗೆ 15 ಕಿ.ಮೀ. ದೂರವಿದೆ. ಶ್ರಾವಣದಲ್ಲಿ ವಸಿಷ್ಠ ಆಶ್ರಮದಿಂದ ಜ್ಯೋತಿರ್ಲಿಂಗ ಭೀಮಾಶಂಕರ ಧಾಮ್‌ಗೆ ಕಾಂವಡಿ ಯಾತ್ರೆಯ ಮೂಲಕ ಶಿವಭಕ್ತರು ಜಲಾಭಿಷೇಕ ಮಾಡಲು ಬರುತ್ತಾರೆ.

ನಂಬಿಕೆಯ ವಿಷಯವೇನೇ ಇರಲಿ, ಅಸ್ಸಾಂನ ಭೀಮಾಶಂಕರ ಯಾತ್ರೆ ಪ್ರವಾಸಿಗರಿಗೆ ವಿಶಿಷ್ಟ ಅನುಭವ ನೀಡುತ್ತದೆ. ಒಂದೆಡೆ ಭಕ್ತಿ ಭಾವುಕತೆ, ಇನ್ನೊಂದೆಡೆ ಪ್ರಾಕೃತಿಕ ಸೌಂದರ್ಯದ ಮಾಂತ್ರಿಕತೆ. ಈ ಭಾವಯುಗಳದಲ್ಲಿ ಭೀಮಾಶಂಕರ ದರ್ಶನ ಮನಸ್ಸಿನಲ್ಲಿ ಅಪೂರ್ವ ನೆನಪಾಗಿ ದಾಖಲಾಗಿಬಿಡುತ್ತದೆ. ■